



ವೇದಾ ಕೃಷ್ಣಮೂರ್ತಿ

# ಇದು ಲಟ್ಟಣಿಗೆಯಲ್ಲ, ಬ್ಯಾಟ್!

2021ರ ವನಿತೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಭಾರತ ತಂಡದ ಆಟಗಾರ್ತಿಯರ ಸಿದ್ಧತೆ ಆರಂಭವಾಗಿದೆ. ದಕ್ಷಿಣ ಆಫ್ರಿಕಾದಲ್ಲಿ ಅರ್ಹತಾ ಸುತ್ತು ಆಡಲು ಮಿಥಾಲಿ ರಾಜ್ ಬಳಗವು ತೆರಳಲಿದೆ. ಹೋದ ಜೂನ್‌ನಲ್ಲಿ ಇಂಗ್ಲೆಂಡ್‌ಗೆ ವಿಶ್ವಕಪ್ ಆಡಲು ಹೋದಾಗ ಬಹಳ ಜನರಿಗೆ ತಂಡದ ಬಗ್ಗೆ ಆಸಕ್ತಿ ಇರಲಿಲ್ಲ. ಆದರೆ ಈ ಸಲ ಎಲ್ಲರ ಕಣ್ಣು ಈ ಹುಡುಗಿಯರ ಮೇಲಿದೆ!

■ ಗಿರೀಶ ದೊಡ್ಡಮನಿ

ಜುಲೈನಲ್ಲಿ ನಡೆದ ಮಹಿಳಾ ವಿಶ್ವಕಪ್ ಟೂರ್ನಿಯ ನಂತರ ಕ್ರಿಕೆಟರ್ ಕೌರ್ ಮನೆಮಾತಾದರು. ಆ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆಗಿ ಹೊರಹೊಮ್ಮಿದ ಭಾರತ ತಂಡದ ಆಟಗಾರ್ತಿಯರ ವರ್ಚಸ್ಸು ಬದಲಾಯಿತು. ಮಾಧ್ಯಮಗಳು, ಜನರು, ಪ್ರಾಯೋಜಕರು ಮಹಿಳಾ ಕ್ರಿಕೆಟಿಗರನ್ನು ಎಲ್ಲೆಡೆ ಗುರುತಿಸತೊಡಗಿದರು. ಸಾಮಾಜಿಕ ಜಾಲತಾಣಗಳಲ್ಲಂತೂ ಈಗ ಈ ವನಿತೆಯರ ಸುದ್ದಿಯೇ.

ಭಾರತದ ಮಹಿಳಾ ಕ್ರಿಕೆಟ್ ಕ್ಷೇತ್ರದ ಬೆಳವಣಿಗೆಗೆ ಹೊಸ ವೇಗವೂ ಲಭಿಸಿತು. 'ಲಟ್ಟಣಿಗೆ ಹಿಡಿದು ಚಪಾತಿ ಲಟ್ಟಿಸುವ ಹುಡುಗಿಯರು ಬ್ಯಾಟು–ಚೆಂಡಿನ ಆಟದಲ್ಲಿಯೂ ಉನ್ನತ ಸಾಧನೆ ಮಾಡಬಲ್ಲರು' ಎಂಬುದನ್ನು ಜಗತ್ತು ಒಪ್ಪಿಕೊಳ್ಳುವಂತೆ ಮಾಡಿದರು. ಅದರಲ್ಲೂ ನಾಯಕಿ ಮಿಥಾಲಿ ರಾಜ್, ಮಧ್ಯಮ ವೇಗಿ ಬೌಲರ್ ಜೂಲನ್ ಗೋಸ್ವಾಮಿ ಎರಡು ವಿಶ್ವದಾಖಲೆಗಳನ್ನು ಬರೆದು ಮಿಂಚಿದ್ದಾರೆ. ಹರ್ಮನ್‌ಪ್ರೀತ್ ಸಿಂಗ್, ಕನ್ನಡತಿಯರಾದ ರಾಜೇಶ್ವರಿ ಗಾಯಕವಾಡ್ ಮತ್ತು ವೇದಾ ಕೃಷ್ಣಮೂರ್ತಿ ತಮಗೆ ಸಿಕ್ಕ ಅವಕಾಶಗಳಲ್ಲಿ ಪ್ರತಿಭೆ ಮೆರೆದಿದ್ದಾರೆ. ಭವಿಷ್ಯದ ತಾರೆಗಳಾಗುವ ವಿಶ್ವಾಸ ಮೂಡಿಸಿದರು. ಈ ಜನಪ್ರಿಯತೆಯೊಂದಿಗೆ ಅವರ ವೈಯಕ್ತಿಕ ಜೀವನದಲ್ಲಿಯೂ ಹಲವು ಬದಲಾವಣೆಗಳಾಗಿವೆ. ಸಾಮಾಜಿಕ ಸ್ಥಾನಮಾನ ಹಾಗೂ ಆರ್ಥಿಕ ಬಲ ಹೆಚ್ಚಾಗಿದೆ. ಆತ್ಮವಿಶ್ವಾಸವೂ ಇಮ್ಮಡಿಸಿದೆ.

## ದಿಟ್ಟ ನಾಯಕಿ ಮಿಥಾಲಿ

ತಮಿಳು ಭಾಷಿಕ ಕುಟುಂಬದ ಆ ಹುಡುಗಿ ಬರೋಬ್ಬರಿ ಎಂಟು ವರ್ಷ ಶಾಸ್ತ್ರೀಯ ನೃತ್ಯ ಅಭ್ಯಾಸ ಮಾಡಿದ್ದಳು. ಕಲಾಕ್ಷೇತ್ರದಲ್ಲಿ ಅಮೋಘ ಸಾಧನೆ